ಅಸಲು ದಾವಾ ಸಂಖ್ಯೆ: - **199/2019** ಪಿ.ಡಬ್ಲ್ಯೂ:-1

ದಿನಾಂಕಃ 06-06-2024 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು :- ಪ್ರತಿವಾದಿಗಳ ಪರ ವಕೀಲರಿಂದ :-

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಾಗಿರುವ ವಿಚಾರಗಳನ್ನು ನನ್ನ ತಾಯಿ ಹೇಳಿ ಬರೆಸಿರುತ್ತಾರೆ. ಸದರಿ ವಿಚಾರಗಳು ನನಗೆ ಗೊತ್ತು. ದಿಃ 13-09-2022 ರಂದು ನನ್ನ ತಾಯಿ ನನಗೆ ಮುಖ್ತಾರನಾಮೆಯನ್ನು ಬರೆದುಕೊಟ್ಟಿರುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಾಗಿರುವ ವಿಚಾರಗಳನ್ನು ನನಗೆ ನನ್ನ ತಾಯಿ ಮುಖ್ತಾರನಾಮೆಯನ್ನು ಬರೆದುಕೊಡುವ 1 ತಿಂಗಳ ಪೂರ್ವದಲ್ಲಿ ಹೊನ್ನಾಳಿಯಲ್ಲಿ ಬೆರಳಚ್ಚು ಮಾಡಿಸಿರುತ್ತಾರೆ. ಆದರೆ ನಿರ್ದಿಷ್ಟವಾದ ದಿನಾಂಕ ನನಗೆ ನೆನಪಿಲ್ಲ. ನನ್ನ ಮುಖ್ಯ ವಿಚಾರಣೆಯನ್ನು ಬೆರಳಚ್ಚು ಮಾಡುವ ಸಮಯದಲ್ಲಿ ನನ್ನ ತಾಯಿಗೆ ಆರೋಗ್ಯದಲ್ಲಿ ಸ್ವಲ್ಪ ಮಟ್ಟಿಗೆ ತೊಂದರೆ ಇತ್ತು. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನಮೂದಾಗಿರುವ ವಿಚಾರವನ್ನು ಬೆರಳಚ್ಚು ಮಾಡುವ ಸಮಯದಲ್ಲಿ ಇರಲಿಲ್ಲ. ನಾನು ವಕೀಲರ ಕಚೇರಿಗೆ ಬಂದ ನಂತರ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಾಗಿರುವ ವಿಚಾರಗಳನ್ನು ನನ್ನ ತಾಯಿ ನನಗೆ ತಿಳಿಸಿರುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಸರ್ವೇ ನಂ. 248/ಪಿ1 ರಲ್ಲಿ 3 ಎಕರೆ 15 ಗುಂಟೆ ಮತ್ತು ಸರ್ವೇ ನಂ. 258/ಪಿ1 ರಲ್ಲಿ 4 ಎಕರೆ 33 ಗುಂಟೆ ಜಮೀನಿನ ಬಗ್ಗೆ ನಮೂದಾಗಿರುತ್ತದೆ. ಸದರಿ ಮೇಲ್ಕಂಡ ಆಸ್ತಿಗಳನ್ನು ನಾನು ಖುದ್ದಾಗಿ ನೋಡಿರುವುದಿಲ್ಲ. ನನ್ನ ತಾಯಿ ಸದರಿ ಜಮೀನುಗಳನ್ನು ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ಮೇಲ್ಕಂಡ ಆಸ್ತಿಯಲ್ಲಿ ಸುಮಾರು 3 ಎಕರೆ 30 ಗುಂಟೆ ಜಮೀನಿನಲ್ಲಿ ಸರ್ಕಾರಿ ಶಾಲೆ ಇದೆ ಎಂದರೆ ಸರಿಯಲ್ಲ. ಮೇಲ್ಕಂಡ ಆಸ್ತಿಯಲ್ಲಿ ಸುಮಾರು 50 ವರ್ಷಗಳಿಂದ ಸರ್ಕಾರಿ ಶಾಲೆಯ ಕಟ್ಟಡ ಇದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಸರ್ಕಾರಿ ಶಾಲೆ ಇಲ್ಲ

ಎನ್ನುವ ವಿಚಾರವನ್ನು ನನ್ನ ತಾಯಿ ನನಗೆ ತಿಳಿಸಿರುತ್ತಾರೆ. ದಾವಾ ಆಸ್ತಿಯ ಉತ್ತರ ದಿಕ್ಕಿಗೆ ನಲ್ಲೂರು ಮತ್ತು ಸಾಸ್ವೇಹಳ್ಳಿಗೆ ಹೋಗುವ ರಸ್ತೆ ಇದೆ ಎಂದರೆ ಸರಿ. ರಸ್ತೆಯ ಪಕ್ಕದಲ್ಲಿ ಶಾಲೆ ಇದೆ ಎಂದರೆ ಸರಿಯಲ್ಲ. ಶಾಲೆಯ ಪಶ್ಚಿಮ ದಿಕ್ಕಿಗೆ ತಾರೆ ಮರದ ರಸ್ತೆ ಇದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ನಾನಾಗಲೀ ನನ್ನ ತಾಯಿಯಾಗಲೀ ಖುದ್ದಾಗಿ ನೋಡಲಿಲ್ಲದ ಕಾರಣ ದಾವಾ ಆಸ್ತಿಗಳಲ್ಲಿ ಏನು ಇದೆ ಎನ್ನುವ ವಿಚಾರ ನನಗೆ ಗೊತ್ತಿಲ್ಲದಿದ್ದರೂ ಸಹ ಗೊತ್ತಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈಗ 31 ವರ್ಷ ವಯಸ್ಸು. ನನ್ನ ಮದುವೆಯು ಈಗ್ಗೆ 15 ರಿಂದ 16 ವರ್ಷಗಳ ಹಿಂದೆ ಆಗಿರುತ್ತದೆ. ನನ್ನ ಮದುವೆಯಾದ ನಂತರ ನಾನು ನನ್ನ ಗಂಡನ ಮನೆಯಲ್ಲಿದ್ದೇನೆ. ನಾನು ಸುಮಾರು 16 ವರ್ಷಗಳಿಂದ ಅರಬಗಟ್ಟೆ ಗ್ರಾಮದಲ್ಲಿ ವಾಸವಾಗಿದ್ದೇನೆ. ನನ್ನ ಗಂಡನ ಹೆಸರು ರಮೇಶ್. ನನ್ನ ಮದುವೆಯಾದ 2 ವರ್ಷಗಳ ನಂತರ ನಾನು ದಾವಾ ಆಸ್ತಿಗಳನ್ನು ನೋಡಿದ್ದೇನೆ. ಆ ಸಮಯದಲ್ಲಿ ದಾವಾ ಆಸ್ತಿಗಳಲ್ಲಿ ಭತ್ತ, ಅಡಿಕೆ ಬೆಳೆಗಳನ್ನು 1 ನೇ ಪ್ರತಿವಾದಿ ಬೆಳೆಯುತ್ತಿದ್ದರು.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶಕೋರಿದ್ದು, ನೀಡಿ ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.